# ಪ್ರಜಾಪ್ರಭುತ್ವವಾದಿಯ ರಾಜಗೃಹ




■ ಎಂ.ಎಸ್. ಆಶಾದೇವಿ

**ಪ್ರಜಾಪ್ರಭುತ್ವ ಹಾಗೂ ಸಮ ಸಮಾಜದಲ್ಲಿ ನಂಬಿಕೆಯುಳ್ಳ ಪ್ರತಿಯೊಬ್ಬರ ಕಣ್ಣ ಬೆಳಕು ಮತ್ತು ಎದೆಯ ತೇವ ಡಾ. ಬಿ.ಆರ್. ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆಯನ್ನು ನೆನಪಿಸುವಂತೆ ಇರುವ ಸ್ಥಳಗಳಲ್ಲೊಂದು, ಮುಂಬಯಿಯ 'ರಾಜಗೃಹ'. ಇದು ಬರಿ ಮನೆಯಲ್ಲ, ಮಹಾನ್ ಸಾಧಕನೊಬ್ಬನ ಕನಸು ಕನವರಿಕೆಗಳ ಆಡುಂಬೊಲವಾಗಿದ್ದ ಪರಿಸರ. 'ರಾಜಗೃಹ'ಕ್ಕೆ ಭೇಟಿಯ ನೆಪದ ಈ ವಿಶಿಷ್ಟ ಬರಹ, ಬಾಬಾ ಸಾಹೇಬರ ನೆನಪುಗಳನ್ನು ಸಹೃದಯರ ಮನಸ್ಸುಗಳಲ್ಲಿ ನಾಟಿ ಮಾಡುವಂತಿದೆ. ಅಂಬೇಡ್ಕರ್ ಪರಿನಿರ್ವಾಣ ದಿನದ (ಡಿ. 6) ತಿಂಗಳಲ್ಲಿ 'ರಾಜಗೃಹ'ದ ಮೂಲಕ ಬಾಬಾಸಾಹೇಬರ ನೆನಪು.**

ಅದು ನನ್ನ ಬಹುದಿನಗಳ ಕನಸು ನನಸಾದ ಗಳಿಗೆಯಾಗಿತ್ತು. ಇದು ಕ್ಲೀಷೆಯಂತೆ, ಭಾವುಕ ಹೇಳಿಕೆಯಂತೆ ಕಾಣುತ್ತದೆ. ಆದರೆ ಕನಸು ನನಸಾದ ಗಳಿಗೆಯನ್ನು ಅಪೂರ್ವವೆಂದು ಹೇಳದೆ, ಇನ್ನು ಹೇಗೆ ಹೇಳಬೇಕು?

ಅಂಬೇಡ್ಕರ್ ಮೊದಲು ಬಂದದ್ದು ನನ್ನ ಭಾವಲೋಕಕ್ಕಲ್ಲ. ಹೈಸ್ಕೂಲು ಓದುತ್ತಿದ್ದಾಗ ಮಹಾಡ್ ಕೆರೆಯ ಪ್ರಸಂಗ ನನಗೆ ಪಠ್ಯವಾಗಿತ್ತು. ಕೆರೆಯ ನೀರನ್ನು ಮುಟ್ಟಿದ ಕಾರಣಕ್ಕಾಗಿ ಶಿಕ್ಷೆಗೊಳಗಾಗುವ ಘಟನೆಯನ್ನು ಓದಿದಾಗ ಆದ ಆಘಾತ ಈಗಲೂ ನನ್ನ ಸ್ಮೃತಿಕೋಶದಲ್ಲಿದೆ. ಇದು ಹೇಗೆ ಸಾಧ್ಯ? ಎನ್ನುವ ಪ್ರಶ್ನೆ ಕೆಲವು ದಿನಗಳ ಕಾಲ ಎಡೆಬಿಡದೆ ನನ್ನನ್ನು ಕಾಡಿತ್ತು. ತಂದೆಯನ್ನು ಕೇಳಿದಾಗ, ಮೊದಲ ಬಾರಿಗೆ ಅವರು ಭಾರತೀಯ ಜಾತಿವ್ಯವಸ್ಥೆಯ ಮೂಲ ಚೌಕಟ್ಟನ್ನು ನನಗೆ ಪರಿಚಯಿಸುವ ಪ್ರಯತ್ನ ಮಾಡಿದರು. ಆಗಲೇ ವಚನ ಚಳವಳಿಯ ಪರಿಚಯವೂ ನನಗಾದದ್ದು. ಹೀಗೆ ಒಂದು ಆಘಾತದಂತೆ ಅಂಬೇಡ್ಕರ್ ಅವರನ್ನು ನಾನು ಮೊದಲು ಭೇಟಿಯಾಗಿದ್ದು. ದಿನಕಳೆದಂತೆ ಅಂಬೇಡ್ಕರ್ ಮತ್ತು ಗಾಂಧಿ ಎನ್ನುವ ಯಮಳರು ನಿರಂತರವಾಗಿ ನನ್ನ ಆಲೋಚನಾ ಕ್ರಮವನ್ನು ಆವರಿಸತೊಡಗಿದರು. ಈ ಇಬ್ಬರನ್ನೂ ಆಧುನಿಕ ಭಾರತದ ನಿಕಷಗಳೆಂದು ನೋಡುವುದು ಬಹುಸಂಖ್ಯಾತರ ಅನುಭವವೇ ಆಗಿದೆ.

1998ರಲ್ಲಿ ಡಿ.ಆರ್. ನಾಗರಾಜ್ ಅವರ 'ದಿ ಫ್ಲೇಮಿಂಗ್ ಫೀಟ್' ಕೃತಿಯನ್ನು 'ಉರಿ ಚಮ್ಮಾಳಿಗೆ' ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದೆ. ಮುಂಚೆ ಅದನ್ನು, ಅದು